**ಕರ್ನಾಟಕ ಸರ್ಕಾರ**

**ಆಯುಷ್ ಇಲಾಖೆ**

**ಧನ್ವಂತರಿ ರಸ್ತೆ, ಆನಂದರಾವ್ ವೃತ್ತದ ಹತ್ತಿರ, ಬೆಂಗಳೂರು-560 009**

**ದೂರವಾಣಿ ಸಂಖ್ಯೆ: 080-22876553 , ಫ್ಯಾಕ್ಸ್ : 080-22340139**

**ಇ-ಮೇಲ್ : directorayush.est@gmail.com**

---

ಸಂಖ್ಯೆ:ಆಯುಷ್/7/ಸಿಬ್ಬಂದಿ(5)/2025 ದಿ: 22-05-2025

**ಅಧಿಕೃತ ಜ್ಞಾಪನ**

**ವಿಷಯ:** 2025ನೇ ಸಾಲಿನ ಗ್ರೂಪ್-ಎ,ಬಿ,ಸಿ ಮತ್ತು ಡಿ ಹುದ್ದೆಗಳ ವರ್ಗಾವಣೆಗೆ ಸಂಬಂಧಿಸಿದಂತೆ ನೋಡಲ್ ಅಧಿಕಾರಿಗಳನ್ನು ನೇಮಿಸುವ ಬಗ್ಗೆ.

****

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರೆ ಸಿಬ್ಬಂದಿಗಳ ವರ್ಗಾವಣೆ ನಿಯಂತ್ರಣ) ಅಧಿನಿಯಮದನ್ವಯ, ಆಯುಷ್ ಇಲಾಖೆಯಲ್ಲಿ 2025ನೇ ಸಾಲಿನ ಗ್ರೂಪ್-ಎ,ಬಿ,ಸಿ ಮತ್ತು ಡಿ ಹುದ್ದೆಗಳ ವರ್ಗಾವಣೆಗೆ ಸಂಬಂಧಿಸಿದಂತೆ ಮಾಹಿತಿ/ದಾಖಲಾತಿಗಳನು ಪಡೆದು ಸಿದ್ಧಪಡಿಸಿ ಇರಿಸಿಕೊಳ್ಳತಕ್ಕದ್ದು. ವರ್ಗಾವಣೆಗೆ ಸಂಬಂಧಿಸಿದಂತೆ ಆಯುಕ್ತಾಲಯಕ್ಕೆ ಮಾಹಿತಿ ಸಲ್ಲಿಸಲು ಈ ಕೆಳಕಂಡಂತೆ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ.

| **ಗ್ರೂಪ್-ಎ ಅಧಿಕಾರಿಗಳು** | **ಗ್ರೂಪ್-ಬಿ,ಸಿ ಮತ್ತು ಡಿ ಅಧಿಕಾರಿ/ನೌಕರರುಗಳು** |
|---|---|
| ಸಂಬಂಧಪಟ್ಟ ಜಿಲ್ಲಾ ಆಯುಷ್ ಅಧಿಕಾರಿಗಳು | ಸಂಬಂಧಪಟ್ಟ ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿಯ ಸಹಾಯಕ ಆಡಳಿತಾಧಿಕಾರಿಗಳು |

ನೇಮಿಸಲಾದ ನೋಡಲ್ ಅಧಿಕಾರಿಗಳು ತಮ್ಮ ಜಿಲ್ಲೆಯ ಆಯುಷ್ ಇಲಾಖೆಯ ಎಲ್ಲಾ ಸಂಸ್ಥೆ/ಕಛೇರಿಗಳಿಂದ (ಸರ್ಕಾರಿ ಆಯುಷ್ ಮಹಾವಿದ್ಯಾಲಯಗಳು, ಸರ್ಕಾರಿ ಕೇಂದ್ರೀಯ ಔಷಧಾಗಾರ, ಸರ್ಕಾರಿ ಆಯುಷ್ ತರಬೇತಿ ಕೇಂದ್ರ, ಸರ್ಕಾರಿ ಆಯುಷ್ ಸಂಶೋಧನಾ ಕೇಂದ್ರ, ಸರ್ಕಾರಿ ಹೈಟೆಕ್ ಪಂಚಕರ್ಮ ಆಸ್ಪತ್ರೆ, ವೈಜ್ಞಾನಾಧಿಕಾರಿಗಳ ಕಛೇರಿ, ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸರ್ಕಾರಿ ಆಯುಷ್ ಆಸ್ಪತ್ರೆಗಳು ಮತ್ತು ಚಿಕಿತ್ಸಾಲಯಗಳು, ಜಿಲ್ಲೆಯಲ್ಲಿನ ಇತರೆ ಯಾವುದೇ ಸಂಸ್ಥೆಗಳು) ಮಾಹಿತಿ ಸಂಗ್ರಹಿಸಲು ಹಾಗೂ ಆಯುಕ್ತಾಲಯದಿಂದ ಕೋರಿದ ಕೂಡಲೇ ಜರೂರಾಗಿ ಮಾಹಿತಿ ಒದಗಿಸಲು ಸೂಚಿಸಿದೆ.

Digitally signed by
VIPIN SINGH
Date: 22-05-2025
19:21:39

**ಆಯುಕ್ತರು**

**ಇವರಿಗೆ,**

1. ಎಲ್ಲಾ ಜಿಲ್ಲೆಯ ಜಿಲ್ಲಾ ಆಯುಷ್ ಅಧಿಕಾರಿಗಳು ಮತ್ತು ಸಹಾಯಕ ಆಡಳಿತಾಧಿಕಾರಿಗಳು
2. ಇಲಾಖೆಯ ಎಲ್ಲಾ ಅಧೀನ ಸಂಸ್ಥೆ/ಕಛೇರಿಗಳ ಮುಖ್ಯಸ್ಥರಿಗೆ.
3. ಆಡಳಿತಾಧಿಕಾರಿಗಳು, ಆಯುಷ್ ನಿರ್ದೇಶನಾಲಯ, ಬೆಂಗಳೂರು.
4. ಆಯುಕ್ತರು/ಮುಖ್ಯ ಆಡಳಿತಾಧಿಕಾರಿಗಳ ಆಪ್ತ ವಿಭಾಗ, ಆಯುಷ್ ನಿರ್ದೇಶನಾಲಯ, ಬೆಂಗಳೂರು.
5. ಇಲಾಖೆಯ ಅಧಿಕೃತ ಅಂತರ್ಜಾಲ ನಿರ್ವಹಿಸುವ ವಿಭಾಗ (ವೆಬ್‌ಸೈಟ್) ರವರಿಗೆ ಕಳುಹಿಸುತ್ತಾ, ಇಲಾಖೆಯ ಅಧಿಕೃತ ಅಂತರ್ಜಾಲ ಪ್ರಕಟಿಸಲು ಸೂಚಿಸಿದೆ. (ವರ್ಗಾವಣೆ ಅರ್ಜಿ ನಮೂನೆಗಳನ್ನು ಲಗತ್ತಿಸಿದೆ.
6. ಹೆಚ್ಚುವರಿ/ಕಛೇರಿ ಪ್ರತಿ.

**ಪ್ರತಿಯನ್ನು ಕೆಳಕಂಡವರಿಗೆ ಮಾಹಿತಿಗಾಗಿ ಗೌರವಗಳೊಂದಿಗೆ ಸಲ್ಲಿಸಲಾಗಿದೆ:**

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕು.ಕ.ಇಲಾಖೆ, ವಿಕಾಸಸೌಧ, ಬೆಂಗಳೂರು